ಕಂಡುಂಡು, ನೋಡಿದ ಅನುಭವಗಳನ್ನು ತಮ್ಮೊಂದಿಗೆ ಹಂಚಿಕೊಳ್ಳಬಯಸುತ್ತೇನೆ. ಇದೊಂದು 'ಟಿಪ್ ಆಫ್ ದಿ ಐಸ್ ಬರ್ಗ್' ಅಂದರೆ ದೊಡ್ಡ ಮಂಜುಗಡ್ಡೆಯನ್ನು ಸ್ಪರ್ಶಿಸಿದಂತೆ ಮಾತ್ರ. ಸಂಸಾರ ಎಂಬುದು ದೊಡ್ಡ ಸಮುದ್ರ ಇದ್ದಂತೆ. ಅಲ್ಲಿ ಅನುಭವಗಳು ಸಾಗರದಷ್ಟು ವಿಶಾಲವಾಗಿರುತ್ತವೆ ಎಂಬುದು ಮತ್ತು ಪ್ರತಿಯೊಬ್ಬರ ಅನುಭವಗಳು ವಿಭಿನ್ನವಾಗಿರುತ್ತವೆ ಎಂಬುದು ತಮ್ಮ ಲಕ್ಷ್ಯದಲ್ಲಿ ಇರಲಿ.

ಗಂಡ ಹೆಂಡಿರ ಮಧ್ಯದ ಸರಸ ವಿರಸ ಕುರಿತು ನೂರೆಂಟು ಸರಕುಗಳು ಸಾಮಾಜಿಕ ಮಾಧ್ಯಮಗಳಲ್ಲಿ ನಿತ್ಯ ಹರಿದಾಡುತ್ತಿರುತ್ತವೆ. ಕೌಟಂಬಿಕ ಸರಸವಿರಸಗಳನ್ನು ಕೆಲವು ವಾಹಿನಿಗಳು ತಿರುತಿರುಗಿ ರಾಷ್ಟ್ರೀಯ ಮಹತ್ವದ ಸುದ್ದಿ ಎಂಬಂತೆ ದಿನದುದ್ದಕ್ಕೂ ತೋರಿಸುತ್ತಲೇ ಇರುತ್ತವೆ. ವಾಟ್ಸ್ಆ್ಯಪ್, ಫೇಸ್ ಬುಕ್ ಗಳಲ್ಲಂತೂ ಹೆಚ್ಚಿನವುಗಳು ಗಂಡುಹೆಣ್ಣು ಪರಸ್ಪರ ಪ್ರೀತಿಸುವ, ದ್ವೇಷಿಸುವ, ಮೋಜು-ಮಸ್ತಿಯ ಸುದ್ದಿಗಳು ತುಂಬಿ ತುಳುಕುತ್ತಿರುತ್ತವೆ. ಆದರೆ, ಇಂಥ ಯಾವುದೇ ಸುದ್ದಿ ಮಾಧ್ಯಮಗಳು ಇಲ್ಲದ ಕಾಲದಲ್ಲಿ ನಮ್ಮ ಜನಪದರು ತಮ್ಮದೇ ಆದ ರೀತಿಯಲ್ಲಿ ದಾಂಪತ್ಯ ಜೀವನದ ಸರಸ ವಿರಸಗಳನ್ನು ಸುಖಿಸುತ್ತ, ಅನುಭವಿಸುತ್ತಾ, ಒಬ್ಬರನ್ನು ಒಬ್ಬರು ಛೇಡಿಸುತ್ತಾ ಅನ್ಯೋನ್ಯವಾಗಿ ಬಾಳಿ ಬದುಕಿದರು. ಒಂದಿಷ್ಟು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆ ಸ್ವಲ್ಪ ನಲುಗಿರಲೂಬಹುದು. ಆದರೆ, ಹೊಂದಾಣಿಕೆ ಅನ್ನುವುದು ಬಾಳಿನ ಬೆಸುಗೆ ಇದ್ದಂತೆ. ಪಾಶ್ಚಾತ್ಯರಂತೆ ನೀನಿಲ್ಲದಿದ್ದರೆ ಇನ್ನೊಬ್ಬನೋ / ಇನ್ನೊಬ್ಬಳೋ ಎಂದು ಆಚೆ ಹೋಗಿ ಬದುಕಿದವರಲ್ಲ.

ಗಂಡು ಹೆಣ್ಣಿನ ಮಧ್ಯದ ಪರಸ್ಪರ ಆಕರ್ಷಣೆ ಈ ಸೃಷ್ಟಿಯ ಜೀವ ಜಗತ್ತಿನ ಮಹಾಬೆರಗು. ಇಡೀ ಜೀವ ಜಗತ್ತು ಗಂಡು ಹೆಣ್ಣಿನ ಮಿಲನದಿಂದ, ಪ್ರೀತಿ ಪ್ರೇಮದಿಂದ ಮುಂದುವರೆದಿದೆ ಅಲ್ಲವೆ. ಈ ಮಹಾ ಸೆಳೆತ ಎಳೆತವನ್ನು ನಿಭಾಯಿಸಲೆಂದೇ ಮನುಷ್ಯ ಮದುವೆ, ಕುಟುಂಬ, ಸಮಾಜ, ಬಂಧು-ಬಳಗವೆಂಬ ಒಂದು ವ್ಯವಸ್ಥೆಯನ್ನು ನಿರ್ಮಿಸಿಕೊಂಡು ಸಾವಿರ ಸಾವಿರ ವರ್ಷಗಳಿಂದ ನೆಮ್ಮದಿಯಿಂದ ಬಾಳಿ ಬದುಕಿದ್ದಾನೆ. ಆದರೂ ಈ ವ್ಯವಸ್ಥೆಯಲ್ಲೂ ಅನೇಕ ಏರಿಳಿತಗಳು, ಕಷ್ಟಕಲಹಗಳು ಇದ್ದೇ ಇವೆ. ಅದರಲ್ಲೂ ದಾಂಪತ್ಯ ಜೀವನದ ಸಿಹಿಕಹಿಗಳು, ಕೂಡುವಿಕೆ ಅಗಲಿಕೆಗಳು ದಾಂಪತ್ಯದ ಭಾವಗೀತೆಗಳು ಇದ್ದಂತೆ. 'ಅಗಲಿದರೆ ಸುಡುವ ಸನಿಹವಿರೇ ತಂಪೀವ' ಗಂಡ ಹೆಂಡತಿ ಮಧ್ಯದ ಅನನ್ಯತೆ ಆಗಾಗ ಸ್ವಲ್ಪ ವಿರಸಕ್ಕೂ ಒಳಗಾಗಬಹುದು. ಅದು ತಾತ್ಕಾಲಿಕ. ಅಂಥ ಸಂಸಾರದ ಜಗಳವನ್ನು ನಮ್ಮ ಜನಪದರು:

ಗಂಡ ಹೆಂಡಿರ ಜಗಳ ಗಂಧ ತೀಡಿದ್ದಾಂಗ।  
ನಿಂಗಕ ನೀರು ಎರೆದಂಗ।  
ಹಿರಿಹೊಳಿಯು ಗಂಗವ್ವ ಸಾಗಿ ಹರಿದಂಗ ।

ಎಂದು ಹಾಡಿದ್ದಾರೆ. ಗಂಧವನ್ನು ಉಜ್ಜಿದರೆ ಸುಗಂಧ ಪಸರಿಸುತ್ತದೆ. ಹಾಗೆಯೆ ಗಂಡ ಹೆಂಡಿರ ಜಗಳದ ಪರಿಮಳ ಶಿವನಿಗೆ ಜಲ ಅಭಿಷೇಕ ಮಾಡಿದಂತೆ, ಹಿರಿಹೊಳೆ ಅಂದರೆ ಕೃಷ್ಣಾನದಿ ತುಂಬಿ ಹರಿದಂತೆ ಎಂದು ಸೊಗಸಾಗಿ ದಾಂಪತ್ಯದ ಜಗಳದ ಪರಿಯನ್ನು ವರ್ಣಿಸಿದ್ದಾರೆ. ತುಂಬಿ ಹರಿವ ಕೃಷ್ಣಾನದಿಯ ಒಡಲಿನ ವೈಶಾಲ್ಯವನ್ನು ನೋಡಬೇಕು. ಅದು ಏನೆಲ್ಲವನ್ನು ತನ್ನ ಒಡಲೊಳಗೆ ತುಂಬಿಕೊಂಡು ಶಾಂತವಾಗಿ ಮುಂದೆ ಸಾಗುತ್ತಿರುತ್ತದೆ. ಹಾಗೆಯೆ ದಾಂಪತ್ಯದ ಜಗಳ ಎಲ್ಲ ಸಿಹಿಕಹಿಗಳನ್ನು ನುಂಗುತ್ತ ಮುಂದೆ ಸಾಗುತ್ತಿರುತ್ತದೆ. ಜನಪದರ ಜೀವನದ ಜಗಳದ ಭಾಗವಾಗಿ ಗಂಡ ಹೆಂಡತಿ ಮೇಲೆ ಒಂದಿಷ್ಟು ಕೋಪಗೊಂಡು ಒಂದೇಟು ಹೊಡೆದರೂ ನಂತರ,

ಮಡಿದೀನ ಬಡಿದಾನ ಮನದಾಗ ಮರಗ್ಯಾನ |  
ಒಳಗ್ಹೋಗಿ ಸೆರಗ ಹಿಡಿಯೂತ | ಕೇಳ್ಯಾನ |  
ನಾ ಹೆಚ್ಚೋ ನಿನ್ನ ತವರ್ಹೆಚ್ಚೊ |

ಎಂದು. ಗಂಡ ಹೆಂಡಿರ ಮಧ್ಯ ಆಗಾಗ ತವರುಮನೆ, ಗಂಡನ ಮನೆ, ಮಕ್ಕಳ ವಿಷಯಗಳ ಕುರಿತು ವಾದ ವಿವಾದಗಳಾಗುವುದುಂಟು. ಅಂಥ ಸಂದರ್ಭಗಳಲ್ಲಿ ಜಗಳದ ನಂತರ ಮೇಲಿನಂತೆ ಶರಣಾಗತಿಯ ಅಥವಾ ರಾಜಿ ಸಂದರ್ಭಗಳು ಆಗುವುದುಂಟು. ಗಂಡ ಹೆಂಡಿರ ಜಗಳ ಉಂಡು ಮಲಗುವ ತನಕ, ಮಲಗಿ ಒಂದಾಗುವ ತನಕ ಎಂಬುದು ಎಲ್ಲ ಕಾಲಕ್ಕೂ ಸಲ್ಲುವ ಮಾತು. ನಿತ್ಯ ಹೊಸ ಜುಗಲಬಂದಿ. ಉಂಡು ಮಲಗಿದ ಮೇಲೂ ಜಗಳ ಮುಂದುವರಿದರೆ ಅಥವಾ ಕೆಲ ದಿನ ಮುಂದುವರೆದರೆ, ಒಂದಾಗಿ ಪುನಃ ಮಲಗುವ ತನಕ ತವಕ ತಲ್ಲಣಗಳು ಮುಂದುವರಿಯಬಹುದು. ಸ್ವಲ್ಪ